Form No.4 (Civil)
Deposition Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಎಸ್.ಸಿ. ಸಂಖ್ಯೆ: 38/2018

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಸಾಕ್ಷಿದಾರರ ಹೆಸರು | : | ಶರಣಪ್ಪ |
| ತಂದೆಯ ಹೆಸರು | : | ಗೋವಿಂದಪ್ಪ |
| ವಯಸ್ಸು | | 57 ವರ್ಷಗಳು |
| ಉದ್ಯೋಗ | : | ಒಕ್ಕಲುತನ |
| ವಾಸ | : | ಬಳಿಚಕ್ರ |

ಪ್ರಮಾಣವಚನ ಬೋಧಿಸಿದ ದಿನಾಂಕ: 11-08-2021

ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ

ಮೃತ ತಿಮ್ಮಪ್ಪ ಈತನು ನನ್ನ ಮಗ. ಕೋರ್ಟಿನ ಮುಂದಿರುವ ಆರೋಪಿತರು ನನಗೆ ಗೊತ್ತು.

2. ಈಗ್ಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ರಾತ್ರಿ 10.00 ಗಂಟೆಗೆ ಬಳಿಚಕ್ರ ಗ್ರಾಮದಲ್ಲಿ ಹಳೆ ಬ್ಯಾಂಕಿನ ರೋಡಿನ ಮೇಲೆ ಆರೋಪಿತರಿಬ್ಬರು ನನ್ನ ಮಗನಿಗೆ ಜಾಡಿಸಿ ದಬ್ಬಿದ್ದರಿಂದ ನನ್ನ ಮಗನ ತಲೆಯ ಹಿಂಭಾಗ ಪೆಟ್ಟಾಗಿತ್ತು.

3. ನನ್ನ ಮಗನನ್ನು ಮೊದಲಿಗೆ ಯಾದಗಿರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ನಂತರ ರಾಯಚೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ಅಲ್ಲಿಂದ ಬಳ್ಳಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ನಂತರ ಅಲ್ಲಿಂದ ಬೆಂಗಳೂರು ಆಸ್ಪತ್ರೆಗೆ ಸೇರಿಕೆ ಮಾಡುವ ಸಮಯದಲ್ಲಿ ನನ್ನ ಮಗ ದಾರಿಯಲ್ಲಿಯೇ ತೀರಿಕೊಂಡಿದ್ದಾನೆ.

4. ನನ್ನ ಮಗನಿಗೆ 1ನೇ ಆರೋಪಿ ಅಂಜಪ್ಪ ಏನಲೇ ಊಟಾ ಆಯಿತಾ ಅಂತಾ ಕೇಳಿದನು. ಅದಕ್ಕೆ ನನ್ನ ಮಗ ಏನಲೇ ಅಂತಾ ಮಾತನಾಡಬೇಡ ಸರಿಯಾಗಿ ಮಾತನಾಡು ಅಂತಾ 1ನೇ ಆರೋಪಿ ಅಂಜಪ್ಪನಿಗೆ ತಿಳಿಸಿದ್ದಾನೆ. ಆಗ 2ನೇ ಆರೋಪಿ ಸಾಬಣ್ಣ ಅಂದರೆ 1ನೇ ಆರೋಪಿ ಅಣ್ಣ ಬಂದು ಈತನ ಹತ್ತಿರ ಏನು ಮಾತನಾಡುತ್ತೀಯ ಅಂತಾ ಇಬ್ಬರು ಆರೋಪತರು ಸೇರಿ ನನ್ನ ಮಗನನ್ನ ಜಾಡಿಸಿ ದಬ್ಬಿದ್ದಾರೆ. ಆ ಕಾರಣದಿಂದ ನನ್ನ ಮಗ ತೀರಿಕೊಂಡಿದ್ದಾನೆ. ಈ ಕುರಿತು ನಾನು

ತಾಣೆಗೆ ಹೋಗಿ ಫಿರ್ಯಾದು ಕೊಟ್ಟಿದ್ದೇನೆ. ಸಾಕ್ಷಿ ಕೋರ್ಟಿನ ಮುಂದೆ ಫಿರ್ಯಾದು ಮತ್ತು ತಮ್ಮ ಸಹಿ ನೋಡಿ ಗುರುತುಮಾಡಿದ್ದು, ಸದರಿ ದಾಖಲೆಯನ್ನು ಈಗ ನಿಪಿ-1 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತಾ ಗುರುತುಮಾಡಲಾಯಿತು. ನಿಪಿ-1 ಫಿರ್ಯಾದನ್ನು ಚಾಸಾ-2 ನರೇಶ ಇತನು ನಾನು ಹೇಳಿದ ರೀತಿಯಲ್ಲಿ ಬರೆದುಕೊಟ್ಟಿದ್ದಾರೆ.

5. ನಂತರ ಪೋಲೀಸರು ಗುನ್ನಾ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಫೋಟೋ ತೆಗೆದಿದ್ದಾರೆ. ಗುನ್ನಾ ಜಾಗವನ್ನು ನಾನೇ ತೋರಿಸಿದ್ದೇನೆ. ಸಾಕ್ಷಿ ಕೋರ್ಟಿನ ಮುಂದೆ ಗುನ್ನಾ ಜಾಗೆಯ ಪಂಚನಾಮೆ ಮತ್ತು ತಮ್ಮ ಸಹಿ ನೋಡಿ ಗುರುತುಮಾಡಿದ್ದು, ಸದರಿ ದಾಖಲೆಯನ್ನು ಈಗ ನಿಪಿ-2 ಅಂತಾ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತಾ ಗುರುತುಮಾಡಲಾಯಿತು. ಆ ಕಾಲಕ್ಕೆ ತೆಗೆದ ಫೋಟೋಗಳನ್ನು ಸಾಕ್ಷಿ ನೋಡಿ ಗುರುತುಮಾಡಿದ್ದು ಸದರಿ ಫೋಟೋಗಳನ್ನು ಈಗ ನಿಪಿ-3 ರಿಂದ 6 ಅಂತಾ ಗುರುತುಮಾಡಲಾಯಿತು. ಪಂಚನಾಮೆ ಕಾಲಕ್ಕೆ ಚಾಸಾ-2 ಮರೆಪ್ಪ ಮತ್ತು ಚಾಸಾ-4 ದೊಡ್ಡಪ್ಪ ಬಂದಿದ್ದರು.

6. ನನ್ನ ಮಗ ತೀರಿಕೊಂಡ ನಂತರ ಆತನ ಶವವನ್ನು ನಾವು ಸೈದಾಪೂರ ಸರ್ಕಾರಿ ಆಸ್ಪತ್ರೆಗೆ ತಂದಿದ್ದೇವೆ.

7. ನನ್ನ ಮಗನ ಸಾವಿಗೆ ಕೋರ್ಟಿನ ಮುಂದಿರುವ ಇಬ್ಬರು ಆರೋಪಿತರು ಕಾರಣ ಇದ್ದಾರೆ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಜಿ.ಆರ್.ಬಿ ವಕೀಲರಿಂದ ಃ</u>

ಆರೋಪಿತರ ಪರ ವಕೀಲರು ಹಾಜರು ಇದ್ದು ಸಮಯ ಕೇಳುತ್ತಾರೆ, ಪಾಟೀ ಸವಾಲಿಗೆ ಮದ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

**(ಪಿ.ಡಬ್ಲ್ಯೂ.1) ದಿನಾಂಕಃ 11-08-2021 ರಂದು ಮದ್ಯಾಹ್ನ 3.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಜಿ.ಆರ್.ಬಿ ವಕೀಲರಿಂದ ಃ**

ಸಮಯದ ಅಭಾವ ಇದ್ದು ಉಳಿಕೆ ಪ್ರಕರಣಗಳನ್ನು ಅಟೆಂಡ್ ಮಾಡಬೇಕಾಗಿದ್ದು. ಪಾಟೀಸವಾಲಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ. ಹೇ. ಕೇ. ಸ. ಇದೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

Form No.4 (Civil)
Deposition Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಯಾದಗಿರಿ

ಎಸ್.ಸಿ. ಸಂಖ್ಯೆ: 38/2018

ಪ್ರಾ.ಸಾ. 2 ಚಾ.ಸಾ. 2

| | |
|---|---|
| ಸಾಕ್ಷಿದಾರರ ಹೆಸರು | : ನರೇಶ |
| ತಂದೆಯ ಹೆಸರು | : ಈರಪ್ಪ ಪೂಜಾರಿ |
| ವಯಸ್ಸು | 26 ವರ್ಷಗಳು |
| ಉದ್ಯೋಗ | : ಡಿಇಓ ಕೋವಿಡ್‌ಕೇರ ಸೆಂಟರ್ |
| ವಾಸ | : ಬಳಿಚಕ್ರ |

ಪ್ರಮಾಣವಚನ ಬೋಧಿಸಿದ ದಿನಾಂಕ: 11-08-2021

ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ಶರಣಪ್ಪ ಗೊತ್ತು, ಮೃತ ತಿಮ್ಮಪ್ಪ ಗೊತ್ತು.

2. ಈ ಪ್ರಕರಣದಲ್ಲಿ ನಾನು ಪೋಲೀಸ ಠಾಣೆಗೆ ಹೋಗಿ ಚಾಸಾ-1 ಶರಣಪ್ಪ ಇವರು ಹೇಳಿದ ಹಾಗೆ ಯಥವತ್ತಾಗಿ ನಿಪಿ-1 ಫಿರ್ಯಾದು ಬರೆದು ಕೊಟ್ಟಿದ್ದೇನೆ. ನಿಪಿ-1ಕ್ಕೆ ನಾನು ಕೂಡಾ ಸಹಿ ಮಾಡಿದ್ದೇನೆ. ನಿಪಿ-1ರಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತು ಮಾಡಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಅಂತಾ ಗುರುತುಮಾಡಲಾಯಿತು.

ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಜಿಬಿಆರ್ ವಕೀಲರಿಂದ :

ಆರೋಪಿತರ ಪರ ವಕೀಲರು ಹಾಜರು ಇದ್ದು ಸಮಯ ಕೇಳುತ್ತಾರೆ, ಪಾಟೀ ಸವಾಲಿಗೆ ಮದ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

**(ಪಿ.ಡಬ್ಲ್ಯೂ.1) ದಿನಾಂಕಃ 11-08-2021 ರಂದು ಮದ್ಯಾಹ್ನ 3.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಜಿ.ಆರ್.ಬಿ ವಕೀಲರಿಂದ ಃ**

ಸಮಯದ ಅಭಾವ ಇದ್ದು ಉಳಿಕೆ ಪ್ರಕರಣಗಳನ್ನು ಅಟೆಂಡ್ ಮಾಡಬೇಕಾಗಿದ್ದು. ಪಾಟೀಸವಾಲಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ. ಹೇ. ಕೇ. ಸ. ಇದೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಯಾದಗಿರಿ.

This document was created with the Win2PDF “print to PDF” printer available at
http://www.win2pdf.com

This version of Win2PDF 10 is for evaluation and non-commercial use only.

This page will not be added after purchasing Win2PDF.

http://www.win2pdf.com/purchase/